# Sri Gopala Dasaru (Bhaganna Dasaru)



# Pushya Krishna saptami

- Place - Uttanoor
- Period - 1722 to 1762
- Place of Birth - Mosarukallu
- Parents - Murari Rayaru & Venkamma
- Gotra - Haritsa Gotra
- Brothers - Rangappa, Seenappa, Dasappa
- Shishyaru - Helavanakatte Giriyamma
  Dasappa (Guru Gopala Vittala)
- Amsha - Ganesha
- His Childhood - Spent his childhood in poverty. Spent time in telling fortune (Jyothishya)
- Ankita - Gopala Vittala
- Dasashresta - Donates 40 years of his life to Sri Shreenivasacharya (Sri Jagannatha dasaru) as per instructions of Srivijayadasaru

Famous keerthane -

"Rathavanerida raaghavendra", "Kotta Bidaradali Eshtu Dina Jeevisali" ;"Vairagya maarga Kelu", "Aava rogavo yenage", "mooru namava dharisida", "yenna bhinnapa kelo dhanvantri", "baarayya ba ba bhakutara priya",
He was able to tell the details of 3 past Janmas.

- He had shown Sun in the midnight to his shishyas.
- Performed Gayathri Japa for two years under a Vata Vriksha in Sankapur
- Wrote more than 1000 Keerthanas and Suladis.

**ಆಗತಾದಿತ್ರಿಕಾಲಜ್ಞಮ್ । ಆಗಮಾರ್ಥಂ ವಿಶಾರದಂ ।**

**ತ್ಯಾಗಭೋಗ ಸಮಾಯುಕ್ತಂ । ಭಾಗಣ್ಣಾರ್ಯಗುರುಂ ಭಜೇ ।**

ಭೂತಭವಿಷ್ಯತ್ ವರ್ತಮಾನ ಕಾಲಗಳ ಜ್ಞಾನವಿರುವ, ವೇದಾರ್ಥ–ವನ್ನು ತಿಳಿಸುವುದರಲ್ಲಿ ನಿಸ್ಸೀಮರಾದ ತ್ಯಾಗದಲ್ಲಿ ಸುಖವನ್ನು ಕಾಣುವ ಗುರು ಭಾಗಣ್ಣದಾಸರನ್ನು ನಮಿಸುವೆ.

( ಆ ರಾ ಧ ನೆ : ಪು ಷ್ಯ ಕೃ ಷ್ಣ ಪ ಕ್ಷ ಅ ಷ್ಟ ಮಿ )

**ಗೋಪ ಪ್ರಖರ ಸಂಕಾಶಂ ಗೋಪಾಲಾರ್ಚನ ತತ್ಪರಂ ।**

**ಗೋದೇವ ವಂದ್ಯ ಪಾದಾಬ್ಜಂ ಗೋಪಾಲಾಖ್ಯ ಗುರುಂ ಭಜೇ ॥**

ಸೂರ್ಯನಂತೆ ಪ್ರಖರವಾದ ತೇಜಸ್ಸುಳ್ಳ ಗೋಪಾಲನ ಆರಾಧನೆಯಲ್ಲಿ ಆಸಕ್ತರಾದ ಭೂಮಿಯಲ್ಲಿ ದೇವತೆಗಳಂತೆ ಇರುವ ಬ್ರಾಹ್ಮಣರಿಂದ ಪೂಜಿತವಾದ ಪಾದಕಮಲವುಳ್ಳ ಗುರುಗಳಾದ ಗೋಪಾಲದಾಸರನ್ನು ವಂದಿಸುವೆನು.

**ಭೂಪಾಲನತಪಾದಾಬ್ಜಂ ಪಾಪಾಲಿಪರಿಹಾರಿಣಂ ।**

**ಗೋಪಾಲದಾಸಮೀಡೇऽಹಂ ಗೋಪಾಲಹರಿದರ್ಶನಂ ॥**

ರಾಜರುಗಳಿಂದ ನಮಸ್ಕೃತಪಾದಕಮಲವುಳ್ಳ ಪಾಪಗಳ ಸಮೂಹವನ್ನು ದೂರೀಕರಿಸುವ ಭಗವಂತನ ಜ್ಞಾನವನ್ನು ಪಡೆದ ಗೋಪಾಲದಾಸರನ್ನು ಸ್ತೋತ್ರಮಾಡುವೆ.

೧. ರಾ ಗ – ಮೋ ಹ ನ : ತಾ ಳ – ಅ ಟ ತಾ ಳ

ಗೋಪಾಲದಾಸರ ದಿವ್ಯ ಚರಣಗಳು
ಕಾಪಾಡಲೆನ್ನ ಸತತ । ಪ ।
ತಾಪಸೋತ್ತಮ ವಿಜಯರಾಯರ ಕೃಪಾಜಾಹ್ನ
ವೀ ಪ್ರವಾಹದೊಳು ತೇಲಿ ಶೋಭಿಸುತಿರುವ । ಅ ಪ ।
ಇವರ ಪೂಜೆಯೆ ನಮ್ಮ ವಿಜಯರಾಯರ ಪೂಜೆ
ಇವರ ದಯವೇ ವಿಜಯರಾಯರ ದಯವು
ಇವರ ಕೊಂಡಾಡುವುದೇ ವಿಜಯರಾಯರ ಸ್ತೋತ್ರ
ಇವರೇ ವಿಜಯರಾಯರ ಮುಖ್ಯ ಪ್ರತಿಮಾ । ೧ ।
ವೈರಾಗ್ಯ ಹರಿಭಕ್ತಿ ವಿಜ್ಞಾನಗಳ ಕೊಟ್ಟು
ಘೋರ ದುರಿತಗಳೋಡಿಸಿ
ಶ್ರೀರಮಣನ ಪದ ತೋರುವರು ಬಿಡದೆ ಈ
ಸೂರಿಗಳ ನಂಬಿದವ ಧನ್ಯ ಮಾನ್ಯ । ೨ ।
ವರದಗೋಪಾಲ ಗುರುಗೋಪಾಲ
ಶ್ರೀರಂಗ ವಲಿದ ದಾಸರು ಈ ಮಹಾ
ಕರುಣಾಳುಗಳ ನಂಬಿ ಹರಿಭಕುತರೆನಿಸಿದರು
ಮರುದೀಶ ಬಾದರಾಯಣವಿಟ್ಠಲನ ಪ್ರೀಯ । ೩ ।

---

೨. ಬಾಗಿ ಬೇಡುವೆ ಪಿಡಿಯೊ ಕೈಯ್ಯ ಬೇಗ।
ಭಾಗವತ ಜನಪ್ರೀಯ ಭಾಗಣ್ಣ ದಾಸಾರ್ಯ॥

ದ್ವಿಜ ಕುಲಾಬ್ಧಿಗೆ ಪೂರ್ಣ ದ್ವಿಜರಾಜನೆಂದೆನಿಸಿ
ವಿಜಯವಿಟ್ಠಲ ದಾಸರೊಲುಮೆ ಪಾತ್ರ
ನಿಜಮನದಿ ನಿತ್ಯದಲಿ ಭುಜಗಶಯನನ ಪಾದ
ಭಜಿಪ ಭಾಗವತರೊಳಿಡು ಎಂದು॥

ನೀನೇವೆ ಗತಿ ಎಂಬ ದೀನರಿಗೆ ನಾನೆಂಬ
ಹೀನಮತಿ ಕಳೆದು ಪವಮಾನ ಪಿತನ
ಧ್ಯಾನ ಗಮ್ಯುವ ದಿವ್ಯ ಜ್ಞಾನ ಮಾರ್ಗವ ತೋರಿ
ಸಾನುರಾಗದಿ ಪೊರೆವ ಜ್ಞಾನಿ ದಯ ವಾರಿಧಿಯೆ॥

ಮಂದ ಜನ ಸಂದೋಹ ಮಂದಾರು ತರುವಿಜಿತ
ಕಂದರ್ಪ ಜನಕ ಕಾರುಣ್ಯ ಸಿಂಧು ಬಂಧು
ಕಂದನೆಂದೆಣಿಸೆನ್ನ ಕುಂದುಗಳ ಎಣಿಸದಲೆ
ಹೃದಯ ಮಂದಿರದಿ ಶ್ರೀಶ್ಯಾಮ ಸುಂದರನ ತೋರೆಂದು
ಬಾಗಿ ಬೇಡುವೆ॥

---

೩. ರಾಗ – ಪೂರ್ವಿ : ತಾಳ – ಆದಿತಾಳ

ರಥವಾನೇರಿದ ರಾಘವೇಂದ್ರ । ಸದ್ಗುಣಗಳ ಸಾಂದ್ರ ।ಪ।
ಸತತ ಮಾರ್ಗದಿ ಸಂತತ ಸೇವಿಪರಿಗೆ । ಅತಿ
ಹಿತದಲಿ ಮನೋರಥವ ಕೊಡುವೆನೆಂದು ।ಅಪ।
ಚತುರ ದಿಕ್ಕು ವಿದಿಕ್ಕುಗಳಲ್ಲಿ । ಚರಿಪಾಜನರಲ್ಲಿ
ಮಿತಿಯಿಲ್ಲದೆ ಬಂದು ಓಲೈಸುತಲಿ । ವರವಾ ಬೇಡುತಲಿ
ನುತಿಸುತ ಪರಿಪರಿ ನತರಾಗಿಹರಿಗೆ
ಗತಿಪೇಳದೆ ಸರ್ವಥಾ ಬಿಡೆನೆಂದು ।೧।

ಅತುಳ ಮಹಿಮಾನಾ ದಿನದಲ್ಲಿ । ದಿತಿಜಾವಂಶದಲಿ
ಉತ್ಪತ್ತಿಯಾಗಿ ಉಚಿತಾದಲ್ಲಿ । ಉತ್ತಮ ಮತಿಯಲ್ಲಿ
ಅತಿಶಯವಿರುತಿರೆ ಪಿತನ ಬಾಧೆಗೆ ಮ–
ನ್ಮಥ ಪಿತನೊಲಿಸಿದ ಜಿತ ಕರುಣದಲಿ । ೨ ।
ಪ್ರಥಮ ಪ್ರಹ್ಲಾದ ವ್ಯಾಸಮುನಿಯೆ । ಯತಿರಾಘವೇಂದ್ರ
ಪತೀತರೋದ್ಧಾರಿಯೆ ಪಾವನಕಾರಿಯೇ । ಕರಮುಗಿವೆನು ಧೊರೆಯೆ
ಕ್ಷಿತಿಯೊಳು ಗೋಪಾಲವಿಟ್ಠಲನ ಸ್ಮರಿಸುತ
ಪ್ರತಿ ಮಂತ್ರಾಲಯದೊಳು ಅತಿ ಮೆರೆವ । ೩ ।

### ೪. ರಾಗ – ಧನ್ಯಾಶ್ರೀ : ತಾಳ – ಏಕತಾಳ

ಗುರು ರಾಘವೇಂದ್ರರ ಚರಣ ಕಮಲವನ್ನು
ಸ್ಮರಿಸುವ ಮನುಜರಿಗೆ । ಪ ।
ಕರೆಕರೆಗೊಳಿಸುವ ದುರಿತ ದುಷ್ಕೃತವೆಲ್ಲ
ಕರಿಯು ಕಂಡ ಸಿಂಹನ ತೆರನಾಗುವುದಯ್ಯ । ಅ ಪ ।
ಗುರುಮಧ್ವಮತವೆಂಬ ವರ ಕ್ಷೀರಾಂಬುಧಿಯಲ್ಲಿ
ಹರ ಧರಿಸಿದ ಶಶಿಯಂತುದಿಸಿ ಪರಮತ ತಿ–
ಮಿರಕ್ಕೆ ತರಣಿಕಿರಣನೆನೆಸಿ ಪಿರಿದು
ಮೆರೆವ ಸಿರಿರಾಮನರ್ಚಕರಾದ । ೧ ।
ಹರಿಯೆ ಸರ್ವೋತ್ತಮ ಸಿರಿಯು ಆತನ ರಾಣಿ
ಪರಮೇಷ್ಟಿ ಮರುತರೆ ಗುರುಗಳೆಂದು

ಗರುಡಶೇಷರುದ್ರ ಸಮರೆಂದು ಸ್ಥಾಪಿಸಿ

ಸ್ಥಿರ ತಾರತಮ್ಯ ಪಂಚಭೇದ ಸತ್ಯವೆಂಬ ।೨।

ಅಂಧಕರಿಗೆ ಚಕ್ಷು ವಂಧ್ಯರಿಗೆ ಸುರತರು

ಬಂದಬಂದವರಭೀಷ್ಟಗಳನಿತ್ತು

ಒಂದಾರುನೂರುವತ್ಸರ ವೃಂದಾವನದಲ್ಲಿ

ಚೆಂದಾಗಿ ನಿಂದು ಮೆರೆವ ಕೃಪಾಸಿಂಧು ।೩।

ರಾ ಎನ್ನೆ ದುರಿತರಾಶಿಗಳ ದಹಿಸುವ

ಘ ಎನ್ನೆ ಘನಜ್ಞಾನ ಭಕುತಿ ಈವ

ವೇಂ ಎನ್ನೆ ವೇಗದಿ ಜನನಮರಣ ದೂರ

ದ್ರ ಎನ್ನೆ ದ್ರವಿಣಾರ್ಥ ಶ್ರುತಿ ಪ್ರತಿಪಾದ್ಯನ ಕಾಂಬ ।೪।

ವರ ತುಂಗಾತೀರ ಮಂತ್ರಾಲಯ ಪುರದಲ್ಲಿ

ಪರಿಪರಿ ಸೇವೆ ಭೂಸುರರಿಂದ ಕೊಳುತ

ಸಿರಿಯರಮಣ ನಮ್ಮ ಗೋಪಾಲವಿಟ್ಠಲನ

ಚರಣ ಸೇವಿಸುತಿಪ್ಪ ಗುರುಶಿಖಾಮಣಿಯಾದ ।೫।

### ೫. ರಾಗ – ಕಮಾಚ್ : ತಾಳ – ಆದಿತಾಳ

ಗಜವದನ ಪಾವನ ವಿಘ್ನನಾಶನ ।ಪ।

ವರಪಾಶಾಂಕುಶಧರ ಪರಮದಯಾಳೊ

ಕರುಣಾಪೂರಿತ ಗೌರಿವರಕುಮಾರನೆ ।೧।

ಸುಂದರವದನ ಅರವಿಂದನಯನ ಘನ–

ಸುಂದರಿ ಕಂದನೆ ಬಂದು ರಕ್ಷಿಸೊ ।೨।

ಗೋಪಾಲವಿಟ್ಠಲನ ಅಪಾರ ಭಜಕನೆ

ಶಾಪಾನುಗ್ರಹಶಕ್ತ ಅನೇಕ ಮಹಿಮ ।೩।

## ೬. ರಾಗ – ಪಂತುವರಾಳಿ : ತಾಳ – ಆದಿತಾಳ

ಪಾರ್ವತಿ ಪಾಲಿಸೆನ್ನ । ಮಾನಿನಿರನ್ನೆ ।

ಪಾರ್ವತಿ ಪಾಲಿಸೆನ್ನ ।ಪ।

ಪಾರ್ವತಿ ಭಕುತರ ಸಾರಥಿ ವಂದಿಪೆ

ಸುರಪತಿ ಗಜಮುಖಮೂರುತಿ ಮಾತೆ ।ಅ ಪ।

ಮನದಭಿಮಾನಿಯೆ ನೆನೆವೆನು ನಿನ್ನನು

ಅನುಕರಿಸೆನ್ನನು ಅಂಬುಜಪಾಣಿ ।೧।

ಮಂಗಳೆ ಮೃಡನಂತರಂಗಳೆ ಹರಿಪದ

ಭೃಂಗಳೆ ತುಂಗಳೆ ಪನ್ನಗವೇಣಿ ।೨।

ಗುಣಪೂರ್ಣ ವೇಣುಗೋಪಾಲವಿಟ್ಠಲನ್ನ

ಕಾಣಿಸಿ ಕೊಡುವಂತ ಶೂಲಿಯ ರಾಣಿ ।೩।

### ೭. ರಾಗ – ಪೀಲು : ತಾಳ – ಖಂಡಛಾಪುತಾಳ

ಕೋಮಲೆ ರಮಾದೇವಿಯ ನೋಡಬನ್ನಿರೆ
ಕಮಲಾರಿಸಹೋದರಿಯನೀಗ ಬೇಡಬನ್ನಿರೆ ।ಪ।
ಇಂದುನಿಭದ ಸುಂದರಿಯರು ಬಂದು ನೋಡಿರೆ ಈ
ಕುಂದರದನೆ ಮಂದರೋದ್ಧರನರ್ಧಾಂಗಿಯೆ ।೧।
ಭಕ್ತಿಯಿಂದ ಭಜಿಪರಿಗೆ ಮುಕ್ತಿಕೊಡುವಳೆ
ಶಕ್ತಿಯುಕ್ತಿಗಳನೆ ಕೊಟ್ಟು ಅರ್ತಿ ಮಾಳ್ಪಳೆ ।೨।
ದಾಸನಾದರೆ ಶ್ರೀಶನರಾಣಿ ಪೋಷಿಸುವಳೆ
**ಗೋಪಾಲವಿಟ್ಠಲ** ಘಾಸಿಮಾಡದೆ ಪೋಷಿಸುವಳೆ ।೩।

### ೮. ರಾಗ – ಆರಭಿ : ತಾಳ – ಅಟತಾಳ

ಬಾರೋ ಮನಕೆ । ಹೇ ಶ್ರೀನಿವಾಸ ।ಪ।
ಪಾಪಿ ನಾ ನೆಂಬಿಯಾ ಶ್ರೀಪತಿ ನಿನ್ನ ನಾಮಕೆ
ಪೋಪದ ಪಾಪ ಮಾಡಲಾಪನೆ ಯೆಂದಿಗು ।೧।
ನೀನು ಕುಣಿಸಿದಂತೆ ನಾನು ಕುಣಿವೆನಯ್ಯ ।
ಏನು ಇದಕೆ ಅನುಮಾನವಿಲ್ಲವೊ ದೇವ ।೨।
ಸಿರಿಯಿಂದೊಪ್ಪುತ ಪರಿವಾರಸಹಿತಾಗಿ ।
ವರದ**ಗೋಪಾಲವಿಟ್ಠಲ**ರೇಯ ಬೇಗ ।೩।

### ೯. ರಾಗ – ಸಿಂಧುಭೈರವಿ : ತಾಳ – ರೂಪಕತಾಳ

ಕುಣಿ ಕುಣಿಯೊ ಕೃಷ್ಣ ಕುಣಿಕುಣಿಯೊ ।ಪ।
ಫಣಿ ಫಣದಲಿ ಠಣ ಠಣ ಕುಣಿದಂತೆ ।ಅಪ।
ಅಂದುಗೆಯಲುಗಲು ಮಾಗಾಯಿವುಲಿಯಲು
ಚೆಂದದಿ ಕಿರುಗೆಜ್ಜೆ ಝುಣಕು ಕಿಂಝುಣಕೆನೆ ।೧।
ಧಂಧಣ ಧಣಕೆಂದು ಬೊಮ್ಮ ಮದ್ದಳೆ ಹೊಯ್ಯೆ
ತಂದನ್ ತಾನಾ ಎಂದು ಹನುಮಂತ ಪಾಡಲು ।೨।
ಧಿಂ ಧಿಂ ಧಿಮಿಕೆಂದು ನಂದಿವಾಹನ ತಾಳ
ಚೆಂದದಿ ಬಾರಿಸೆ ಇಂದಿರೆಯರಸನೆ ।೩।

ಅಂಬರದಲಿ ದಿವ್ಯಾಂಬರ ಧರಿಸಿ
ಚಿಂಬಿ ಭೇರಿಗಳೆಲ್ಲ ಸಂಭ್ರಮದಲಿ ನೋಡೆ ।೪।
ವರದಗೋಪಾಲವಿಟ್ಠಲಯೆನ್ನ ಶಿರದಲ್ಲಿ
ಪರಮ ಸುಂದರ ದಿವ್ಯ ಚರಣ ದ್ವಯಗಳಿಂದ ।೫।

## ೧೦. ರಾಗ – ಕಾನಡ : ತಾಳ – ಖಂಡಛಾಪುತಾಳ

ಆವ ರೋಗವೊ ಎನಗೆ ದೇವಧನ್ವಂತ್ರಿ ।ಪ।
ಸಾವಧಾನದಿ ಕೈಯ ಪಿಡಿದು ನೀ ನೋಡಯ್ಯ ।ಅ ಪ।
ಹರಿ ಮೂರ್ತಿಗಳು ಕಾಣಿಸವು ಎನ್ನ ಕಂಗಳಿಗೆ
ಹರಿಯ ಕೀರ್ತನೆಯು ಕೇಳಿಸದೆನ್ನ ಕಿವಿಗೆ
ಹರಿ ಮಂತ್ರಸ್ತೋತ್ರ ಬಾರದು ಎನ್ನ ನಾಲಿಗೆಗೆ
ಹರಿ ಪ್ರಸಾದವು ಜಿಹ್ವೆಗೆ ಸವಿಯಾಗದಯ್ಯ ।೧।
ಹರಿಪಾದ ಸೇವೆಗೆನ್ನ ಹಸ್ತಗಳು ಚಲಿಸವು
ಗುರುಹಿರಿಯರಂಘ್ರಿಗೆ ಶಿರ ಬಾಗದು
ಹರಿಯ ನಿರ್ಮಾಲ್ಯವಾಘ್ರಾಣಿಸದು ನಾಸಿಕವು
ಹರಿಯಾತ್ರೆಗಳಿಗೆನ್ನ ಕಾಲೇಳದಯ್ಯ ।೨।
ಅನಾಥಬಂಧು ಗೋಪಾಲವಿಟ್ಠಲರೇಯ
ಎನ್ನ ಭಾಗದ ವೈದ್ಯ ನೀನೆಯಾದೆ
ಅನಾದಿ ಕಾಲದ ಭವರೋಗ ಕಳೆಯಯ್ಯ
ನಾನೆಂದಿಗು ಮರೆಯೆ ನೀ ಮಾಡಿದುಪಕಾರ ।೩।

## ೧೧. ರಾಗ – ಮಾಂಡ್ : ತಾಳ – ಖಂಡಛಾಪುತಾಳ

ಏನು ಸುಖವೊ ಎಂಥಾ ಸುಖವೊ ।ಪ।
ತಂಬೂರಿ ಮೀಟುತ್ತ ಹೃದಯ ಅಂಬಕದಿಂದ ಆನಂದ
ಅಂಬುಗರೆಯುತ್ತ ಬಲು ಸಂಭ್ರಮದಿಂದಿಹರ ಸಂಗ ।೧।
ಗೆಜ್ಜೆಯ ಕಾಲಲ್ಲಿ ಕಟ್ಟಿ ಲಜ್ಜೆ ಬಿಟ್ಟು ಹರಿಯ ನಾಮ
ಗರ್ಜನೆ ಮಾಡುತ್ತ ಅಘವರ್ಜರಾಗಿಹರ ಸಂಗ ।೨।
ಸ್ವರ್ಣಲೋಷ್ಠ ಸಮವೆಂದು ತನ್ನದೆಂಬೊ ಹಮ್ಮುತೊರೆದು

ಘನ್ನ ಮಹಿಮನ್ನ ಪಾಡಿ ಧನ್ಯರಾಗಿಹರ ಸಂಗ ।೩।
ಪುಷ್ಪದಿ ಸುಗಂಧ ಹ್ಯಾಂಗಿಪ್ಪದೊ ತದ್ವತ್ತು ಜಗ–
ದಪ್ಪ ಬೊಮ್ಮಾದಿಗಳಲ್ಲಿ ಇಪ್ಪನೆನ್ನುವರ ಸಂಗ ।೪।
ದರ್ವಿಯಂತೆ ದೇಹವನ್ನು ಸರ್ವದಾ ತಿಳಿದು ಶೇಷ
ಪರ್ವತವಾಸನ್ನ ನಂಬಿ ಉರ್ವಿಯೊಳೊಗಿಹರ ಸಂಗ ।೫।
ನಡೆವೋದು ನುಡಿವೋದು ನಿರುತ ಕೊಡುವೋದು ಕೊಂಬೋದು ಜಗ–
ದೊಡೆಯನ ಪ್ರೇರಣೆಯೆಂದು ನುಡಿದು ಹಿಗ್ಗುವರ ಸಂಗ ।೬।
ಸೃಷ್ಟಿಗೊಡೆಯನ ಮನಮುಟ್ಟಿ ಭಜಿಸುತ್ತ ಜ್ಞಾನ
ಕೊಟ್ಟ ಗೋಪಾಲವಿಟ್ಠಲಗಿಷ್ಟರಾಗಿಹರ ಸಂಗ ।೭।

## ೧೨. ರಾಗ – ಸುರುಟಿ : ತಾಳ – ಆದಿತಾಳ

ಭ್ರಾಂತನಾದೆನಲ್ಲ ಪರಗತಿ ಚಿಂತೆಯೆಂಬುದಿಲ್ಲ। ಶ್ರೀ–
ಕಾಂತನ ಪದಗಳ ಸಂತತ ಪೂಜಿಸಿ
ಸಂತೋಷಿಸಲಿಲ್ಲ ಬರಿದೆ ಸಂತೋಷಿಸಲಿಲ್ಲ ।ಪ।
ಮೋಸ ಹೋದೆನಲ್ಲ ವಿಷಯದ ಆಸೆ ತೀರಲಿಲ್ಲ
ಹೇಸಿಗೆ ಭವ ಸುಖ ಲೇಸೆಂದೆನಿಪ ವಿಲಾಸವಾಯಿತಲ್ಲ ।೧।
ಮಂದನಾದೆನಲ್ಲ ದಿನಗಳು ಸಂದು ಹೋದುವಲ್ಲ
ಮಂದರಧರ ಮುಕುಂದನಂಘ್ರಿಯ ಪೊಂದಿ ಸುಖಿಸಲಿಲ್ಲ ।೨।
ದೇಹ ನಿತ್ಯವಲ್ಲ ಮಮತೆ ಗೇಹ ವ್ಯರ್ಥವೆಲ್ಲ
ಮೋಹ ವಸ್ತು ಗೋಪಾಲವಿಟ್ಠಲ ಬಲ್ಲ ಮೋಹದರಸವೆಲ್ಲ ।೩।

## ೧೩. ರಾಗ – ಆರಭಿ : ತಾಳ – ಆದಿತಾಳ

**ಹ್ಯಾಂಗೆ ಮಾಡಲಯ್ಯ ಕೃಷ್ಣ ಹೋಗುತಿದೆ ಆಯು ।ಪ।**
**ಮಂಗಳಾಂಗ ಭವಭಂಗ ಬಿಡಿಸಿ ನಿನ್ನ**
**ಡಿಂಗರಿಗನ ಮಾಡೊ ಅಂಗಜ ಜನಕ ।ಅ ಪ।**

**ಏಸು ಜನುಮದ ಸುಕೃತದ ಫಲವೊ ತಾನು ಜನಿಸಲಾಗಿ**
**ಭೂಸುರ ದೇಹದ ಜನುಮವು ಎನಗೆ ಸಂಭವಿಸಿದೆಯಾಗಿ**

ತೋಷಶಾಸ್ತ್ರಮತ ಚಿನ್ಹಿತನಾಗದೆ ದೋಷಕೆ ಒಳಗಾಗಿ
ಲೇಸು ಸಾಧನವ ಕಾಣದೆ ದುಸ್ಸಹವಾಸದಿಂದಲಿ ದಿನದಿನ ಕಳೆದೆ ।೧।

ಶಶಿಮುಖಿ ಕನಕದ ಆಸೆಗೆ ಬೆರೆತು ವಸುಪತಿ ನಿನ್ನಡಿಯ
ಹಸನಾಗಿ ನಿನ್ನ ನೆನೆಯದೆ ಕೃಪೆಯ ಗಳಿಸದೆ ಕೆಟ್ಟೆನಯ್ಯ
ನಿಶಿಹಗಲು ಸ್ಥಿರವೆಂದು ತನುವನು ಪೋಷಿಸಲಾಶಿಸಿ ಜೀಯ
ಉಸುರಿದ ನೆಲವೊ ಸರ್ವಕಾಲ ನಿನ್ನೊಡೆತನೆಂಬುವ ಬಗೆಯನು ಅರಿಯದೆ ।೨।

ನೆರೆನಂಬಿದ ಪಾವಟಿಗಳು ಎಲ್ಲ ಸರಿದು ಪೋದುವಲ್ಲ
ಮರಳಿ ಈ ಪರಿ ಜನುಮವು ಬರುವ ಭರವಸೆಯಂತು ಇಲ್ಲ
ಪರಿಪರಿ ವಿಷಯದ ಆಸೆಯು ಎನಗೆ ಪಿರಿದು ಆಯಿತಲ್ಲ
ಹರಿಯೆ ಜಗದಿ ನೀನೊಬ್ಬನಲ್ಲದೆ ಪೊರೆವರಿನ್ನಾರು ಇಲ್ಲವಲ್ಲ ।೩।

ಅವನಿಯೊಳಗೆ ಪುಣ್ಯಕ್ಷೇತ್ರ ಚರಿಸುವ ಹವಣಿಕೆ ಎನಗಿಲ್ಲ
ಪವನಾತ್ಮಕ ಗುರು ಮಧ್ವಶಾಸ್ತ್ರದ ಪ್ರವಚನ ಕೇಳಲಿಲ್ಲ
ತವಕದಿಂದ ಗುರುಹಿರಿಯರ ಸೇವಿಸಿ ಅವರ ಒಲಿಸಲಿಲ್ಲ
ರವಿನಂದನ ಕೇಳಿದರುತ್ತರ ಕೊಡೆ ವಿವರ ಸರಕು ಒಂದಾದರಿಲ ।೪।

ಭಾಗವತರೊಡಗೂಡಿ ಉಪವಾಸ ಜಾಗರ ಒಂದು ದಿನ ಮಾಡಲಿಲ್ಲ
ರಾಗದಿ ಶುಕಮುನಿ ಪೇಳ್ದ ಹರಿಕಥೆ ಸಂಯೋಗ ಎಂಬುದಿಲ್ಲ
ನೀಗುವಂಥ ಭವಭಯ ಭಕುತಿ ವೈರಾಗ್ಯವೆಂಬೋದಿಲ್ಲ
ಯೋಗಿವಂದ್ಯ **ಗೋಪಾಲವಿಟ್ಠಲ** ತಲೆಬಾಗಿ ನಿನ್ನನೇ ಬೇಡಿಕೊಂಬೆ ।೫।

### ೧೪. ರಾಗ – ಮುಖಾರಿ : ತಾಳ – ಆದಿತಾಳ

ಕಾಯೋ ನಾರಸಿಂಹ ಕಾಯೋ ।ಪ।
ಕಾಯೋ ಶ್ರೀ ನಾರಸಿಂಹ ತ್ರಿಯಂಬಕಾದ್ಯಮರೇಶ
ಭಯಾಂಧತಿಮಿರಮಾರ್ತಾಂಡ ಶ್ರೀನಾರಸಿಂಹ ।ಅ ಪ।
ಘೋರ ಅಕಾಲಮೃತ್ಯು ಮೀರಿ ಬರಲು ಕಂಡು
ಧೀರ ನಿ ಬಿಡಿಸದಿನ್ಯಾರೊ ಶ್ರೀ ನಾರಸಿಂಹ ।೧।

ಧೀಷಣನೆ ಸುಭದ್ರ ದೋಷ ಮೃತ್ಯುಗೆ ಮೃತ್ಯು
ಸುಷಮ್ನಾನಾಡಿಸ್ಥಿತವಿಭುವೆ ಶ್ರೀನಾರಸಿಂಹ ।೨।
ಜ್ಞಾನರಹಿತನಾಗಿ ನಾ ನಿನ್ನ ಮರೆತರೆ
ನೀನೂ ಮರೆತದ್ಯಾಕೆ ಪೇಳೊ ಶ್ರೀನಾರಸಿಂಹ ।೩।
ಪ್ರಬಲೋತ್ತಮನೆನಿಸಿ ಅಬಲರ ಕಾಯದಿರೆ
ಸುಬಲರು ಕಂಡು ಮೆಚ್ಚುವರೆ ಶ್ರೀನಾರಸಿಂಹ ।೪।
ಪಾಲಮುನ್ನೀರಾಗರ ಪದುಮಮನೋಹರ ಗೋ–
ಪಾಲವಿಟ್ಠಲ ಜಗತ್ಪಾಲ ಶ್ರೀನಾರಸಿಂಹ ।೫।

### ೧೫. ರಾಗ – ನಾಟಿಕುರಂಜಿ : ತಾಳ – ಛಾಪುತಾಳ

ಏಕೆ ಮಮತೆ ಕೊಟ್ಟು ದಣಿಸುವಿ । ರಂಗ
ನೀ ಕರುಣದಿ ಎನ್ನ ಪಾಲಿಸೊ ಕೃಷ್ಣ ।ಪ।
ನಿನ್ನ ಹಂಬಲಿಸದೆ ಅನ್ಯ ವಿಷಯಗಿಳಿ–
ಗೆನ್ನನೊಪ್ಪಿಸುವುದು ನೀತವೆ
ಮನ್ನಿಸಿ ದಯದಿ ನೀ ಎನ್ನ ಪಾಲಿಸಲು
ನಿನ್ನ ನೇಮಕೆ ಪ್ರತಿಕೂಲನೆ ।೧।

ತನುವು ತನ್ನದು ಅಲ್ಲ ತನು ಸಂಬಂಧಿಗಳೆಂಬೊ
ತನುವ್ಯಾರೊ ತಾನ್ಯಾರೋ ಅವರಿಗೆ
ಧನ ಮೊದಲಾದ ವಿಷಯಗಳ ಅನುಭವ ಹಿಂ–
ದಿನ ದೇಹದಂತಲ್ಲವೆ ।೨।

ಇಂದ್ರಿಯಂಗಳು ವಿಷಯದಿಂದ ತೆಗೆಯಲು ಗೋ
ವಿಂದ ಎನ್ನ ವಶಕೆ ಬಾರವೊ
ಇಂದಿರೆ ಅರಸ ಬ್ರಹ್ಮಾದಿವಂದಿತ ನಿನ್ನ
ಬಂಧಕಶಕುತಿಗೆ ನಮೋ ನಮೋ ।೩।

ಅರಿತು ಅರಿತು ಎನಗರೆಲವವಾದರು
ವಿರಕುತಿ ವಿಷಯದಿ ಬಾರದು

**ಕರುಣಾಸಾಗರ ನಿನ್ನ ಮರೆಹೊಕ್ಕಲ್ಲದೆ**
**ಮರುಳು ನೀಗುವ ಬಗೆಗಾಣೆನೊ ।೪।**

**ಎಂದಿಗೆ ನಿನ್ನ ಚಿತ್ತಕೆ ಬರುವುದೊ**
**ಸ್ವಾಮಿ ಅಂದೆ ಉದ್ಧರಿಸಯ್ಯ ಕರುಣಿಯೆ**
**ಸುಂದರ ವಿಗ್ರಹ ಗೋಪಾಲವಿಟ್ಠಲ ಸುಖಸಾಂದ್ರ**
**ಭವಮೋಚಕ ನಮೋ ನಮೋ ।೫।**

## ೧೬. ಸಾಧನಕೆ ಒಲಿವ

ಪ್ರಥಮ ಸಾಧನ ಜೀವ ಅಸ್ವತಂತ್ರ
ದ್ವಿತೀಯ ಸಾಧನ ಹರಿ ಸ್ವತಂತ್ರಸ್ಮೃತಿ
ತೃತೀಯ ಸಾಧನ ಜಡಚೇತನ ಜ್ಞಾನ
ಚತುರ ಸಾಧನ ಪೂರ್ಣ ಅಪೂರ್ಣವು
ಚತುರಸಾಧನದೊಳಗೆ ಸರ್ವಸಾಧನವಡಕ
ಮತಿಯಿಂದಲಿ ಇದನೆ ಮತ್ತೆ ವಿಸ್ತರಿಸಲು
ಶತಸಹಸ್ರವು ಆಗಿ ಸಾಧನ ಕಾಣಿಪುವು
ಸತುವ ಜೀವ ಮಾತ್ರಕ್ಕೆ ಸಾಧನ ಹೊರ್ತು
ಗತಿ ಆಗದು ಕಾಣೊ ಎಷ್ಟು ಸಾಧನ ಮಾಡೆ
ಗತಿ ಅಗತಿ ಗಮನ ಸ್ವರ್ಗ ನರಕಗಳಲ್ಲಿ
ಮಿತಿ ಇಲ್ಲದೆ ಪುನ: ಸುತ್ತುತಲೆ ಇರುವ
ಚ್ಯುತದೂರ ಚೆಲುವ ಗೋಪಾಲವಿಠಲ
ಸ್ವತ: ಒಲಿದರೆ ಒಲಿವ ಯತನಕ್ಕಗೋಚರ ॥

ಎಂತು ಪೋಪದು ಮನದ ಕಿಂತು ಎಂಬೋದು ಎನ್ನ
ಅಂತರಂಗದಲ್ಲಿಪ್ಪನು ಸುಂದರಾಂಗ
ಪಿಂತಿನ ಸಂಸಾರ ಮರದು ಪೋಗಿತ್ತು ಈಗ
ಚಿಂತನೆಗೆ ಬಂದು ಬಹುದಣಿಸುವುದು
ಎಂತು ವಿಹಿತದಲ್ಲಿ ಬಿಡಿಸುವೆ ಈ ಅರ್ಥಿ

ನಿಂತಲ್ಲಿ ಕುಳಿತಲ್ಲಿ ಹತ್ತಿಹ್ಯದು
ನಿಂತು ಮತೆಯಲಿ ಪುಟ್ಟಿಸಿದವನಾರು
ಚಿಂತಾಯಕ ದೇವ ಗೋಪಾಲವಿಠಲ
ನಿಶ್ಚಿಂತನಿಗೆ ವಿಷಯನಾಗಿರು ಸರ್ವದಾ ॥

## ೧೭. ಏನ ಬೇಡಲಿ ನಿನ್ನ ಬಳಿಗೆ ಬಂದು

ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ । ಪ ।
ಜನನಿಯ ಕೊಡು ಎಂದು ಜಯವಂತ ಬೇದುವೆನೆ
ಜನನಿ ಏನಿತ್ತಳಾ ಧೃವರಾಯಗೆ
ಜನಕನ ಕೊಡು ಎಂದು ಜಗದೀಶ ಬೇಡುವೆನೆ
ಜನಕನೇನಿತ್ತನಾ ಪ್ರಹ್ಲಾದಗೆ । ೧ ।
ಅನುಜನ ಕೊಡು ಎಂದು ಅತಿಶಯದಿ ಬೇಡುವೆನೆ
ಅನುಜನೇನಿತ್ತನೈ ಆ ವಾಲಿಗೆ
ಧನವನ್ನೆ ಕೊಡು ಎಂದು ದೈನ್ಯದಲಿ ಬೇಡುವೆನೆ
ಧನವ ಗಳಿಸಿದ ಸುಯೋಧನನೇನಾದನು । ೨ ।
ಸತಿಯಳ ಕೊಡು ಎಂದು ಮತಿವಂತ ಬೇಡುವೆನೆ
ಸತಿಯಿಂದ ದ್ಯುನಾಮಕನೇನಾದನಯ್ಯ
ಸುತರುಗಳ ಕೊಡು ಎಂದು ಸತತದಲಿ ಬೇಡುವೆನೆ
ಸುತರಿಂದ ಧ್ರುತರಾಷ್ಟ್ರ ಗತಿಯೆಷ್ಟು ಪಡೆದ । ೩ ।
ಬಂಧುಗಳ ಕೊಡು ಎಂದು ಚೆಂದದಲಿ ಬೇಡುವೆನೆ
ಬಂಧುಗಳು ಸಲಹಿದರೆ ಗಜರಾಜನ
ಅಂದಣವ ಕೊಡು ಎಂದು ಅಂದದಲಿ ಬೇಡುವೆನೆ
ಅಂದಣೇರಿದ ನಹುಷನೇನಾದನಯ್ಯ । ೪ ।
ಬೇಡುವೆನು ನಾ ನಿನ್ನ ಬೇಡತಕ್ಕದು ದೇವ
ನೀಡೇನೆಂಬುದು ನಿನ್ನ ಮನದೊಳಿತ್ತೆ
ಮೂಡಲಗಿರಿವಾಸ ಗೋಪಾಲವಿಠಲ ಪರರ
ಬೇಡದಂತೆ ಎನ್ನ ಮಾಡಯ್ಯ ಹರಿಯೆ । ೫ ।

## ೧೮. ತತ್ತ್ವನಿರೂಪಣೆ –

ಕರ್ತೃ ನಾನೆಂದರೆ ದೋಷ ಫಲವು ಪ್ರಾಪ್ತಿ
ಕರ್ತನಲ್ಲೆಂದರೆ ಸಾಧನೆಕ್ಕೆ ಫಲವಿಲ್ಲ
ವ್ಯರ್ಥ ಸುಮ್ಮನಿಪ್ಪುದಕ್ಕೆ ಜೀವ ಜಡವಲ್ಲ
ಕರ್ತೃ ಜೀವೆಂಬುವುದು ಶೃತಿ ಸ್ಮೃತಿಗಳಲಿ ಸಿದ್ಧ
ಕರ್ತೃ ಜೀವೆಂಭುದು ಜೀವ ಸ್ವಧೀನಲ್ಲ
ಕರ್ತೃ ನಿಷ್ಟಧರ್ಮ ಕೊಟ್ಟರಿವರಿಗೆ ಉಂಟು
ಕೂರ್ತೆ ಮಾಡುವನಲ್ಲ ಕೊಟ್ಟ ಕತೃತ್ವನ್ಯ
ನಿಷ್ಟವಾಗಿ ಜೀವಕಃತ್ತಿಕಾ ಇಪ್ಪುದು
ಸ್ಫೂರ್ತಿ ಬಂದರೆ ಅರಿವ ಸ್ಪೂರ್ತಿ ಬರದಿರೆ ಮನವ
ಗಾತ್ರ ಹಸಿದರೆ ಅಳುವ ಗಾತ್ರ ತುಂಬಲು ನಲಿವ
ಕೀರ್ತಿ ಅಪಕೀರ್ತಿ ತನ್ನದೆಂದು ಹಿಗ್ಗುವ
ವ್ಯರ್ಥ ಇದರಿಂದ ಆನಂದ ಆಚರಿಸುವ
ಸ್ವಾರ್ಥ ಸುಖವನರಿಯ ಹರಿ ಕರ್ಮಕನಾಗಿ
ಸ್ಫೂರ್ತಿ ತಂದಿತ್ತರೆ ಸುಖವೆ ಬಡುವೆ
ಮರ್ತರೆ ಮರೆವುವನು ಸ್ವಾರ್ಥ ಪುಟ್ಟದೊ ಹರಿಯು ತಿಳಿಸದಿರಲು
ಕರ್ತೃ ಕಾರ್ಯ ತಾ ವಿಷ್ಣು ಗೋಪಾಲವಿಠಲ
ಪಾತ್ರಾಪಾತ್ರವರಿತು ಫಲವನೀವ ॥

## ೧೯. **ಆತ್ಮನಿವೇದನೆ** –

ಎನ್ನ ಅಜ್ಞಾನವೆಲ್ಲ ನಿನ್ನಾಧೀನವಯ್ಯ
ಎನ್ನ ಕರಣಚೇಷ್ಟೆ ವ್ಯಾಪರ ನಿನ್ನಾಧೀನ
ಎನ್ನ ಪ್ರೇರಣೆ ಪ್ರತಿಕ್ಷಣಕೆ ನಿನ್ನಾಧೀನ
ಎನ್ನ ಸ್ಮರಣೆ ಸ್ಪುರಣೆ ನಿನ್ನಾಧೀನ ದಮ್ಮಯ್ಯ ।

ಎನ್ನ ಸ್ವಾಮಿಯೆ ನೀನು ನಿನ್ನ ಬೃತ್ಯನು ನಾನು
ಇನ್ನೊಂದು ನಾನರಿಯೆ ಎನ್ನೊಡೆಯನೆ ಕೇಳು
ಎನ್ನ ಐಶ್ವರ್ಯವು ನಿನ್ನ ಪರವಾಗಲಿ

ಎನ್ನ ಆರೋಗ್ಯವು ನಿನ್ನ ಪರವಾಗಲಿ
ಎನ್ನ ಆಯುಷ್ಯವು ನಿನ್ನ ಪರವಾಗಲಿ
ಎನ್ನ ಸಕಲ ವ್ಯಾಪರ ನಿನ್ನ ಪರ ಆಗಲಿ
ಎನ್ನ ಚರಣಗಳು ನಿನ್ನ ಯಾತ್ರೆಯ ಮೆಟ್ಟಲಿ
ಎನ್ನ ಕರಗಳುನ್ನು ನಿನ್ನ ಪೂಜೆ ಮಾಡಲಿ
ಎನ್ನ ಕರ್ಣಗಳಿನ್ನು ನಿನ್ನ ಕಥೆ ಕೇಳಲಿ
ಎನ್ನ ಚಕ್ಷುಗಳು ನಿನ್ನ ಮೂರ್ತಿ ನೋಡಲಿ
ಎನ್ನ ಜಿಹ್ವೆಯು ಸತತ ನಿನ್ನ ಕೊಂಡಾದಲಿ
ಎನ್ನ ಶಿರಸ್ಸು ನಿನ್ನ ಚರಣಕ್ಕೆರಗುತಿರಲಿ
ಎನ್ನ ಸರ್ವಾಂಗವು ಸಾಷ್ಟಾಂಗ ಹಾಕುತ
ಎನ್ನು ಹಗಲಿರುಳು ನಿನ್ನ ಓಲ್ಗೈಸಲಿ
ಎನ್ನ ಮನೋವಾಕಾಯದಿಂದಿನ್ನು
ಇನ್ನು ಮಾಡಿದ ಕರ್ಮ ನಿನ್ನ ಪರವು ಮಾಡಿ
ನಿನ್ನವನೆನಿಸಯ್ಯ ಘನ್ನ ದಯಾನಿಧಿ ಗೋಪಾಲವಿಠಲ
ಇನ್ನಿದೆ ಮಾಡಿಸೊ ಅನಂತ ಜನ್ಮಕ್ಕು

೨೦.ಉಗಾಭೋಗ –

ಮನೆಯ ಕಟ್ಟುವರುಂಟು ಮಡದಿ ಮಕ್ಕಳುಂಟು
ಧನವ ಗಳಿಸುವರುಂಟು ಗಳಿಸದಿದ್ದವರುಂಟು
ಧನವ ಕಟ್ಟುವರುಂಟು ದಾನ ಮಾಡುವರುಂಟು
ಋಣವ ಕೊಟ್ಟವರುಂಟು ಋಣ ಮಾಡಿದವರುಂಟು
ಮಣಿಗಾರನವಿದರೊಳೆಂದಿಗು ಬೇಡ
ಮುನಿಗಳು ಸಹಿತಾಗಿ ಮೋಸಹೋದರು ಇದಕೆ
ಗುಣಪೂರ್ಣ ಚೆಲ್ವ ಗೋಪಾಲವಿಠಲ ನಿನ್ನ
ಗುಣಚಿಂತನೆಯೊಳಿಡು ಎಷ್ಟೆ ಸಾಕು ॥

೨೧.

ಆರಿಗಾರಾಗುವರೋ ಆಪತ್ತು ಕಾಲಕ್ಕೆ
ಆರಿಗಾರೊದಗುವರೊ ಸಂಪತ್ತು ಕಾಲಕ್ಕೆ
ಆರಿಂದ ಒಪ್ಪುವುದು ಆರಿಂದ ತಪ್ಪುವುದು
ಆರಿಸಿ ನೋಡುವುದು ಇದರ ಕಾರಣವನು ಇದ
ಕಾರು ವಾರಣದಲಿ ನೋಡಿ
ಆರೋಪಿಸಲು ಎಲ್ಲ ಭಾರ ಅವಗೆ
ಕಾರುಣ್ಯ ಮೂರುತಿ ಗೋಪಾಲವಿಠಲ
ಈರೀತಿ ಆರಿದವಗೆ ಇಲ್ಲೆ ಪೊರೆವ ॥

೨೨.

ಅನ್ಯರಿಂದಲಿ ಸುಖವಾಯಿತೆಂಬುದಕಿಂತ
ನಿನ್ನಿಂದಾಯಿತೆಂಬ ಕ್ಲೇಶ ಮೇಲಯ್ಯ
ನಿನ್ನನರಿಯದೆ ಅನ್ಯರ ಬಲ್ಲೆನೆಂಬುದಕಿಂತ
ಕಣ್ಣಿಲ್ಲದಿರುವ ಕುರುಡ ಮೇಲಯ್ಯ
ಪುಣ್ಯ ಪಾಪವನರಿಯದೆ ಬದುಕುವ
ಮನುಜರಿಗಿಂತ ನಾಯಿಕುನ್ನಿ ಲೇಸಯ್ಯ ಕುಲ
ಹೀನನಾದರು ಸುಖದುಃಖಗಳು
ನಿನ್ನಿಂದಾಯಿತೆಂಬ ಮತಿ
ಚೆನ್ನಾಗಿ ತಿಳಿಸಯ್ಯ ಗೋಪಾಲವಿಟ್ಠಲ

೨೩. ಆ ಪ ತ್ತು ಪ ರಿ ಹಾ ರ ಉ ಗಾ ಭೋ ಗ : ರಾ ಗ – ರ ಂ ಜ ನಿ

ಆರಿಗಾರಾಗುವರೊ ಆಪತ್ತು ಕಾಲಕ್ಕೆ
ಆರಿಗಾರಾಗುವರೊ ಸಂಪತ್ತು ಕಾಲಕ್ಕೆ
ಆರಿಂದ ಬಪ್ಪುವುದು ಆರಿಂದ ತಪ್ಪುವುದು
ಆರಿಸಿನೋಡುವುದು ಇದರ ಕಾರಣವ ಇದ–

ಕಾರು ವಾರಣದಲಿ ನೋಡಿ
ಆರೋಪಿಸಲು ಎಲ್ಲ ಭಾರ ಅವಗೆ
ಕಾರುಣ್ಯಮೂರ್ತಿ ಗೋಪಾಲವಿಟ್ಠಲ
ಈ ರೀತಿ ಅಂದವಗೆ ಇಲ್ಲೆ ಪೊರೆವ

೨೪.
ಕಾಲ ಎನಗೆ ಕಾರಣಲ್ಲ ಕರ್ಮ ಎನಗೆ ಕಾರಣಲ್ಲ
ಶೀಲ ವಿಮಲ ಕಾರಣಲ್ಲ ಕಾಮ ಎಂಬೋದೆ ಕಾರಣಲ್ಲ
ಮೇಲು ಮೇಲು ಪೂರ್ವಕ ಕರ್ಮ ಕಾರಣಗಳಿಗೆ ಕಾರಣ ನೀನೆ
ಪಾಲಸಾಗರಶಾಯಿ ಚೆಲ್ವ ಗೋಪಾಲವಿಠಲ
ಆಲೋಚನೆಯು ಎಲ್ಲ ಎನಗೆ ಆಪ್ತ ಬಂಧು ನೀನೇ ನೀನೆ ॥

೨೫.
ಮುಖ್ಯ ಕಾರಣ ವಿಷ್ಣು ಸ್ವತಂತ್ರ ಸರ್ವೇಶ।
ಸಖ್ಯರ ಪೋಷ ಸಿರಿ ಅಜಭವಮರೇಶ। ।
ವ್ಯಾಸ ಕಪಿಲ ಹಯಾಸ್ಯ ಧನ್ವಂತ್ರಿ ವೃಷಭ
ಮಹಿದಾಸ ದತ್ತಾತ್ರೇಯ ಆದ್ಯಮಿತ ರೂಪ।
ಈಸು ರೂಪಗಳಿಂದ ಸುಜ್ಞಾನಿಗಳಿಗೊರೆದು
ಪೋಷಕನು ಆದೆ ಕೃಪಾಳು ಸರ್ವೇಶ॥

ಚೇತನನು ಅಹುದು ನೀ ಚೇಷ್ಟೆಯನು ಮಾಡಿಸಲು
ಅಚೇತನನು ಅಹುದು ನೀ ಸುಮ್ಮನಿರಲು।
ಏತರವ ನಾನಲ್ಲ ನಿನ್ನಂಘ್ರಿ ನಡೆಯೆಲ್ಲ
ಚೇತನನು ಅಹುದು ನೀ ಚಲಿಸೆ ಚಲಿಸುವೆನು। ।
ಧ್ವನಿಯು ವರ್ಣೋದಯ ಶಬ್ಧ ವಾಚ್ಯನು ನೀನೆ
ಗುಣ ದೇಶ ಕಾಲ ಕರ್ಮಗಳು ನೀನೆ।

ತನು ಕರಣ ವಿಷಯ ಮನ ಜೀವ ಸ್ವಾಮಿಯು ನೀನೆ

ಅಣು ಮಹಜ್ಜಗದ ಅಂತರಾತ್ಮಕನೆ। ।
ತಿಳಿ ಎಂಬುವವ ನೀನೆ ತಿಳಿದು ತಿಳಿಸುವ ನೀನೆ
ತಿಳಿದುದಕೆ ಫಲ ನೀನೆ ತೀರ್ಥಪದನೆ
ತಿಳಿಎನ್ನುವುದಕಾಗಿ ತಿಳಿಯಗೊಡದವ ನೀನೆ
ತಿಳಿಸೊ ಸ್ವತಂತ್ರ ನಿನ್ನದು ತಿಳಿಸು ಸರ್ವೇಶ॥

ತಿಳಿವೆಂಬುವವ ನೀನೆ ತಿಳಿದು ತಿಳಿಸುವ ನೀನೆ
ತಿಳಿಸೊ ಸ್ರ್ವೋತ್ತಮರೆಲ್ಲ ತಿಳಿದ ಶೇಷ॥
ತಿಳಿವಲ್ಲಿ ತಿಳಿಪಲ್ಲಿ ತಿಳುವಳಿಕೆ ನೀನಾಗಿ
ಚಲಿಸದಲೆ ಮನ ನಿಲಿಸು **ಗೋಪಾಲ ವಿಟ್ಟಲ॥**